9. ಗಮನ ಸೆಳೆಯುವ ಸೂಚನೆ:

ಅ) ವಿಷಯ: ಶ್ರೀ ಬಿ.ಬಿ. ರಾಮಸ್ವಾಮಿಗೌಡ ಅವರು ಹುಲಿಯೂರುದುರ್ಗ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ರವರು ವಿನಾಕಾರಣ ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿರುವ ಬಗ್ಗೆ ಗೃಹ ಸಚಿವರ ಗಮನ ಸೆಳೆಯುವುದು.

ಶ್ರೀ ಬಿ.ಬಿ. **ರಾಮಸ್ವಾಮಿಗೌಡ** (ಕುಣಿಗಲ್): ಕುಣಿಗಲ್ ತಾಲ್ಲೂಕಿನಲ್ಲಿರುವ ಹುಲಿಯೂರುದುರ್ಗ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ರವರ ದುರ್ವರ್ತನೆ ಮತ್ತು ಅವರ ಕಾರ್ಯವೈಖರಿಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು: ಗೃಹಸಚಿವರ ಪರವಾಗಿ ಸರ್ಕಾರದಿಂದ ಉತ್ತರ ಕೊಡಿ.

ಶ್ರೀ **ಸುರೇಶ್‌ಕುಮಾರ್** (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) (ಗೃಹ ಸಚಿವರ ಪರವಾಗಿ): ಮಾನ್ಯ ಗೃಹ ಸಚಿವರು ವಿಧಾನಪರಿಷತ್‌ನಲ್ಲಿ ಇದ್ದಾರೆ, ಅವರನ್ನು ಕರೆಸಿ ಉತ್ತರ ಕೊಡಿಸುತ್ತೇನೆ ಅಥವಾ ನಾನೇ ಹೇಳಿಕೆಯನ್ನು ನೀಡುತ್ತೇನೆ.

ಅಧ್ಯಕ್ಷರು: ತಾವೇ ಹೇಳಿಕೆಯನ್ನು ನೀಡಿ.

ಶ್ರೀ **ಸುರೇಶ್‌ಕುಮಾರ್** (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಶ್ರೀ ಶ್ರೀಕಾಂತ್ ಪಿ.ಎಸ್.ಐ. ರವರು ದಿನಾಂಕ: 22–09–2008 ರಿಂದ ಹುಲಿಯೂರು ದುರ್ಗ ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರ ಕಾರ್ಯವೈಖರಿಯ ಬಗ್ಗೆ ಶ್ರೀ ಬಿ.ಬಿ. ರಾಮಸ್ವಾಮಿ ಗೌಡ ಎಂ.ಎಲ್.ಎ. ರವರು ಅಸಮಾದಾನ ವ್ಯಕ್ತಿಪಡಿಸಿ ಕೆಲವು ಬಾರಿ ಮೌಖಿಕವಾಗಿ ಆರೋಪಗಳನ್ನು ಮಾಡಿರುತ್ತಾರೆ.

ಶ್ರೀ ಬಿ.ಬಿ. ರಾಮಸ್ವಾಮಿ ಗೌಡ ಎಂ.ಎಲ್.ಎ. ರವರು ದಿನಾಂಕ: 25–07–2009 ರಂದು ಐ.ಜಿ.ಪಿ. ಕೇಂದ್ರ ವಲಯ ಬೆಂಗಳೂರು ರವರಿಗೆ ಮನವಿಯನ್ನು ಸಲ್ಲಿಸಿ ಶ್ರೀ ಶ್ರೀಕಾಂತ್ ಪಿ.ಎಸ್.ಐ. ಹುಲಿಯೂರು ದುರ್ಗ

ರವರ ವಿರುದ್ಧ ಕೆಲವು ಆಪಾದನೆಗಳನ್ನು ಮಾಡಿರುತ್ತಾರೆ. ಐ.ಜಿ.ಪಿ. ಕೇಂದ್ರ ವಲಯ ರವರು ಶ್ರೀ ಬಿ.ಬಿ. ರಾಮಸ್ವಾಮಿಗೌಡ ಎಂ.ಎಲ್.ಎ. ರವರ ಮನವಿಯನ್ನು ಎಸ್.ಪಿ. ತುಮಕೂರು ಜಿಲ್ಲೆರವರಿಗೆ ವಿಚಾರಣೆಗಾಗಿ ಕಳುಹಿಸಿದ್ದು, ಪಿ.ಎಸ್.ಐ. ರವರ ಮೇಲಿನ ಆರೋಪಗಳ ಬಗ್ಗೆ ಕುಣಿಗಲ್ ಉಪ-ವಿಭಾಗದ ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಅಧಿಕಾರಿಗಳಿಂದ ವಿಚಾರಣೆ ಮಾಡಿಸುವ ಸಲುವಾಗಿ ಡಿ.ಎಸ್.ಪಿ. ತುಮಕೂರು ಗ್ರಾಮಾಂತರ ಉಪ-ವಿಭಾಗರವರಿಗೆ ಕಳುಹಿಸಿರುತ್ತಾರೆ.

ಮೇಲ್ಕಂಡ ಆರೋಪಗಳ ಮೇಲೆ ಡಿ.ವೈ.ಎಸ್.ಪಿ. ತುಮಕೂರು ಗ್ರಾಮಾಂತರ ರವರು ವಿಚಾರಣೆ ಮಾಡಿ ವರದಿ ಸಲ್ಲಿಸಿದ್ದು ಪಿ.ಎಸ್.ಐ. ಶ್ರೀ ಶ್ರೀಕಾಂತ್ ರವರ ವಿರುದ್ಧ ಕೆಲವು ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿವೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಆದ್ದರಿಂದ ಸದರಿ ಪಿ.ಎಸ್.ಐ.ರವರ ವಿರುದ್ಧದ ಮೇಲ್ಕಂಡ ಆರೋಪಗಳ ಬಗ್ಗೆ ಕೆ.ಎಸ್.ಪಿ.(ಡಿಪಿ) ನಿಯಮ 6ರ ಅನ್ವಯ ಇಲಾಖಾ ವಿಚಾರಣೆ ನಡೆಸಲು ಡಿ.ಎಸ್.ಪಿ. ತಿಪಟೂರು ಉಪ-ವಿಭಾಗ ರವರನ್ನು ವಿಚಾರಣಾ ಅಧಿಕಾರಿಯನ್ನಾಗಿ ದಿನಾಂಕ: 15-02-2010ರಂದು ಆದೇಶಿಸಿ ನೇಮಿಸಲಾಗಿದೆ.

ಶ್ರೀ ಜಗದೀಶ್ ಬಿನ್ ನಂಜಪ್ಪ ಕದರಾಪುರ ಗ್ರಾಮ ಕಸಬ ಹೋಬಳಿ ಕುಣಿಗಲ್ ತಾಲ್ಲೂಕು ರವರು ದಿನಾಂಕ: 04.02.2010 ರಂದು ಗೃಹ ಸಚಿವರಿಗೆ ಮನವಿಯನ್ನು ಸಲ್ಲಿಸಿ ಹುಲಿಯೂರು ದುರ್ಗ ಪೊಲೀಸ್ ಠಾಣೆ ಕ್ರೈಂ ನಂ. 12/2010 ಕಲಂ 324, 504, 506 (ಬಿ) ರೆ.ವಿ. ಐ.ಪಿ.ಸಿ. ಶ್ರೀ ಶ್ರೀಕಾಂತ್ ರವರು ಕೃತ್ಯನಡೆದ ಸಮಯಕ್ಕೆ ಭೇಟಿ ನೀಡಿಲ್ಲ ಆರೋಪಿಗಳು ಊರಿನಲ್ಲಿದ್ದರೂ ಸಹಾ ಪೊಲೀಸರು ನಿಷ್ಕ್ರೀಯರಾಗಿ ಆರೋಪಿಗಳನ್ನು ಬಂಧಿಸಿಲ್ಲವೆಂದು ಆರೋಪಿಸಿದ್ದು ಸದರಿ ಅರ್ಜಿಯನ್ನು ಮಾನ್ಯ ಗೃಹ ಸಚಿವಾಲಯದಿಂದ ಎಸ್.ಪಿ. ತುಮಕೂರು ಜಿಲ್ಲೆರವರಿಗೆ ಪರಿಶೀಲನೆಗಾಗಿ ದಿನಾಂಕ: 08-02-2010 ರಂದು ಕಳುಹಿಸಲಾಗಿದ್ದು, ಸದರಿ ಅರ್ಜಿಯನ್ನು ವಿಚಾರಣೆಗಾಗಿ ಸಿ.ಪಿ.ಐ. ಕುಣಿಗಲ್ ರವರಿಗೆ ಕಳುಹಿಸಲಾಗಿದ್ದು, ಸಿ.ಪಿ.ಐ.

ಕುಣಿಗಲ್ ರವರು ತಮ್ಮ ವರದಿಯಲ್ಲಿ ಪಿ.ಎಸ್.ಐ. ಶ್ರೀಕಾಂತ್ ರವರ ಮೇಲಿನ ಪ್ರಕರಣದಲ್ಲಿ ಆರೋಪಿತರನ್ನು ದಸ್ತಗಿರಿ ಮಾಡದೆ ಆರೋಪಿತರನ್ನು ಪತ್ತೆ ಮಾಡಲು ಕ್ರಮ ಕೈಗೊಂಡಿರುವಂತೆ ದಿನಚರಿಗಳನ್ನು ಹಾಗೂ ಪ್ರಕರಣ ವರದಿಗಳನ್ನು ಬರೆದು ಇದರಿಂದಾಗಿ ಸಾರ್ವಜನಿಕರು ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ ನಡೆಸಲು ಕಾರಣರಾಗಿರುತ್ತಾರೆಂದು ಅವರ ವಿರುದ್ಧ ಸೂಕ್ತ ಶಿಸ್ತಿನ ಕ್ರಮವನ್ನು ಜರುಗಿಸಲು ಕೋರಿರುತ್ತಾರೆ. ಸಿ.ಪಿ.ಐ. ಕುಣಿಗಲ್ ರವರ ವರದಿಯ ಮೇಲೆ ಶ್ರೀ ಶ್ರೀಕಾಂತ ಪಿ.ಎಸ್.ಐ. ಹುಲಿಯೂರುದುರ್ಗ ರವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಡಿ.ಎಸ್.ಪಿ. ಮಧುಗಿರಿರವರನ್ನು ವಿಚಾರಣಾಧಿಕಾರಿಯನ್ನಾಗಿ ದಿನಾಂಕ: 26–02–2010 ರಂದು ನೇಮಿಸಲಾಗಿರುತ್ತದೆ.

ಈ ಮಧ್ಯ ಹುಲಿಯೂರು ದುರ್ಗ ಟೌನಿನ ವಾಸಿ ನಾಗರಾಜ್ ಬಿನ್ ಪುಟ್ಟಣ್ಣ ಎಂಬುವವರು ಹುಲಿಯೂರು ದುರ್ಗ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀಕಾಂತ್ ರವರು ಶ್ರೀ ನಾಗರಾಜ್ ರವರ ಮೇಲೆ ಹಲ್ಲೆ ಮಾಡಿ ಮಾನಸಿಕವಾಗಿ ತೊಂದರೆ ನೀಡಿರುತ್ತಾರೆಂದು ಆಪಾಧಿಸಿ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ಸಹಾಯಕ ಪೊಲೀಸ್ ಅಧೀಕ್ಷಕರು ಕುಣಿಗಲ್ ಉಪ–ವಿಭಾಗ ರವರು ವಿಚಾರಣೆ ಮಾಡಿ ಅರ್ಜಿ ಅಂಶಗಳ ಬಗ್ಗೆ ಸರಿಯಾದ ಸಾಕ್ಷ್ಯಾಧಾರಗಳು ಇಲ್ಲದ ಪ್ರಯುಕ್ತ ಪಿ.ಎಸ್.ಐ. ರವರ ವಿರುದ್ಧ ಆರೋಪಗಳು ಸಾಬಿತಾಗಿಲ್ಲವೆಂದು ಅಭಿಪ್ರಾಯಪಟ್ಟಿದ್ದು ಅದರಂತೆ ದಿನಾಂಕ: 08–02–2010 ರಂದು ರಾಜ್ಯ ಮಾನವ ಹಕ್ಕು ಆಯೋಗಕ್ಕೆ ವರದಿಯನ್ನು ಸಲ್ಲಿಸಲಾಗಿರುತ್ತದೆ.

ಅಂತಿಮವಾಗಿ ಎಸ್.ಪಿ. ತುಮಕೂರು ಜಿಲ್ಲೆರವರು ಅಭಿಪ್ರಾಯ ನೀಡಿ ಶ್ರೀ ಶ್ರೀಕಾಂತ್ ಪಿ.ಎಸ್.ಐ. ಹುಲಿಯೂರು ದುರ್ಗ ಪೊಲೀಸ್ ಠಾಣೆ ವಿರುದ್ಧ ಆರೋಪಗಳು ಮೇಲ್ನೋಟಕ್ಕೆ ಸಾಭೀತಾಗಿರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶ ಮಾಡಲಾಗಿರುತ್ತದೆ ಹಾಗೂ ಪಿ.ಎಸ್.ಐ. ರವರನ್ನು ಮುಂದಿನ ವರ್ಗಾವಣೆ ಸಮಯದಲ್ಲಿ ಹುಲಿಯೂರು

ದುರ್ಗ ಪೊಲೀಸ್ ಠಾಣೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಬಿ. ರಾಮಸ್ವಾಮಿಗೌಡ: ಮಾನ್ಯ ಅಧ್ಯಕ್ಷರೇ, ಇದು ಕೇವಲ ಅವರು ಮಾಡಿರುವ ಎರಡು ಮೂರು ಘಟನೆಗಳೂ ಸಾಬೀತಾಗಿರುವ ಬಗ್ಗೆ ಅವರು ಹೇಳುತ್ತಿದ್ದಾರೆ. ಅವರು ಮಾಡಿರುವಂಥ ಕೆಲಸಗಳನ್ನು ಒಂದು ಪಟ್ಟಿ ಮಾಡಿದ್ದೇನೆ. ಇವರಿಗೆ ಮೌಖಿಕವಾಗಿ ನಾನು ಬಹಳಷ್ಟು ಸಾರಿ ಹೇಳಿದ್ದೇನೆ. ಆತ ಬಂದು ಎರಡು ಮೂರು ವರ್ಷಗಳಿಂದ ಇಲ್ಲಿಯವರೆಗೆ ಮಾಡಿರುವ ಅನ್ಯಾಯ, ಅತ್ಯಾಚಾರ, ಅಲ್ಲಿನ ಜನರಿಗೆ ಕೊಟ್ಟಿರುವಂಥ ತೊಂದರೆಗಳಂತೂ ಹೇಳತೀರದು. ಇನ್ನೊಂದು ದಿನ ಅವರು ಅಲ್ಲಿದ್ದರೂ ಕೂಡ ಇನ್ನು ಏನೇನು ಘಟನೆಗಳನ್ನು ಮಾಡುತ್ತಾರೋ, ಸಾರ್ವಜನಿಕರಿಗೆ ಯಾವ್ಯಾವ ರೀತಿ ತೊಂದರೆ ಕೊಡುತ್ತಾರೋ ಎಂದು ಈ ಸದನದಲ್ಲಿ ವಿವರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಮೊನ್ನೆ ಒಬ್ಬರು ಮಹಿಳೆ complaint ಕೊಡುವುದಕ್ಕೆ ಎಂದು ಆ station ಗೆ ಹೋದರೆ, ಹೀನಾಯಮಾನವಾಗಿ ಆ ಮಹಿಳೆಯನ್ನು ಬೈದು ಆ ಶಬ್ದಗಳನ್ನು ನಾವು ಸದನದಲ್ಲಿ ಉಪಯೋಗಿಸಬಾರದು, ಆ ಮಹಿಳೆಯನ್ನು ಆಚೆಗೆ ಅಟ್ಟಿದ್ದಾರೆ. ಆ ಮಹಿಳೆ ಕುಣಿಗಲ್ ಪಟ್ಟಣದಲ್ಲಿರುವ DSP ಅಥವಾ circle inspector ಕಛೇರಿಗೆ ಬಂದು complaint ಕೊಡುವುದಕ್ಕೆ ಬಂದರೆ, ಹಿಂಬಾಲಕರನ್ನು ಜೊತೆ ಮಾಡಿ ಕಳುಹಿಸಿ, ಆ ಮಹಿಳೆಯನ್ನು circle inspector Office ಬಾಗಿಲಲ್ಲೇ ತಡೆದು, ಹೆಸರಿಸಿ ಅವರನ್ನು ಜೊತೆಗೆ ವಾಪಸ್ಸು ಊರಿಗೆ ಕರೆದುಕೊಂಡು ಹೋಗಿದ್ದಾರೆ. ಈ ತರಹ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ, ಇವರು ಮಾಡತಕ್ಕಂಥ ಕೆಲಸಗಳಲ್ಲಿ ಕೆಲವುಗಳನ್ನು ಹೇಳುತ್ತೇನೆ. ASI, ಕುಣಿಗಲ್ ಮತ್ತು ಶಶಿಕುಮಾರ್, IPS ಅಧಿಕಾರಿ ಒಬ್ಬರು DSP ಇದ್ದರು, ಅವರುಗಳು ಇವರು ಮಾಡಿರತಕ್ಕಂಥ ಕೆಲಸಗಳು ಸಾಲದ ಎಂದು ಬಂದಿರುವ ದೂರಿನ ಆಪಾದನೆ ಮೇಲೆ Memo No. 142/2009, 4 ಮತ್ತು 5ನೇ ಸ್ಪೋಟನೆಯ ಬಗ್ಗೆ ಲ್ಯಾಕೋ ಕಂಪನಿಯವರ ವಿರುದ್ಧ SP ಮತ್ತು DYSP ಅವರು ಹೋಗಿ, ಅಂಗಡಿಯಲ್ಲಿರುವ ಸ್ಫೋಟಕ ಸಾಮಾಗ್ರಿಗಳು ಮತ್ತು

ಇನ್ನಿತರೆಗಳನ್ನು ಜಪ್ತಿ ಮಾಡಿಕೊಂಡು ಬಂದಿದ್ದಾರೆ. ಇದರ ಕುಮ್ಮಕ್ಕಿನಲ್ಲಿ ಅಲ್ಲಿ ಅವ್ಯವಹಾರ ನಡೆಯುತ್ತಿದೆ. ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಇನ್ನೊಂದು. 149/2009, 118, 379 IPC ಮತ್ತು MMED ಪ್ರಕಾರ ಅಕ್ರಮ ಮರಳು ತುಂಬುವುದು ಮತ್ತು ಇದೇ ಕುಣಿಗಲ್ DYSP ಮತ್ತು ಕುಣಿಗಲ್ ASI ಅವರು ಹೋಗಿ ಶಿಂಶಾ ನದಿಯಲ್ಲಿ ಜಪ್ತಿ ಮಾಡಿದ್ದಾರೆ. ಕೆಲವನ್ನು ಮಾತ್ರ ನಾನು ಓದುತ್ತೇನೆ. ಈ ತರಹ ನೂರಾರು ಹಗರಣಗಳನ್ನು ಆತ ಮಾಡಿದ್ದಾನೆ. ಇನ್ನೊಂದು No. 150, 177ರಲ್ಲಿ ಒಂದು, 186ರಲ್ಲಿ ಇವೆಲ್ಲವುಗಳನ್ನೂ ಕೂಡ DYSP ಮತ್ತು ಕುಣಿಗಲ್ ತಾಲ್ಲೂಕಿನಲ್ಲಿರತಕ್ಕಂಥ ASI ಮುಖಾಂತರ ಸುಮಾರು 7 ದಾಖಲೆಗಳನ್ನು ತೆಗೆದುಕೊಂಡಿದ್ದೇನೆ. ಅಕ್ರಮ ಗಣಿಗಾರಿಕೆ, ಸೀಮೆಎಣ್ಣೆ ದಂಧೆ ನಡೆಯುತ್ತಿರುವುದು ಜೊತೆಗೆ ಲಿಕ್ಕರ್ ಶಾಪ್‌ನಲ್ಲಿ,,.

ಅಧ್ಯಕ್ಷರು : ನೀವು clarification ಕೇಳಿ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ಒಂದೇ ಒಂದು ನಿಮಿಷ ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಇದನ್ನು ಕೇಳಬೇಕು. ಒಂದು ಲಿಕ್ಕರ್ ಶಾಪ್‌ನಲ್ಲಿ ಅವರು ಕೊಡತಕ್ಕಂಥ ಹಣ ಸಾಕಾಗಿಲ್ಲವೆಂದು ಹೇಳಿ ದಾರಿಯಲ್ಲಿ ಹೋಗುತ್ತಿದ್ದವನಿಗೆ ಮತ್ತು ಅಂಗಡಿಯವರಿಗೆ ವಾಗ್ಯುದ್ಧ ನಡೆದಿದೆ. ದಾರಿಯಲ್ಲಿ ನಿಂತುಕೊಂಡು ಯಾರೋ ಮೂರು ಜನ ನೋಡುತ್ತಿದ್ದರೆ, ಏನೋ ನೋಡುತ್ತಿದ್ದೀರಾ ಬೋಳಿ ಮಕ್ಕಳಾ ಎಂದು ಲಾಠಿ ತೆಗೆದುಕೊಂಡು ದಪ ದಪ ಎಂದು ಮೂರು ಜನಕ್ಕೂ ಚಚ್ಚಿದ್ದಾರೆ. ಅವರು ಓಡಿ ಹೋಗಿದ್ದಾರೆ. ಇವೆಲ್ಲಾ ಬೇಕೇ ? ಅವರು ಚಚ್ಚುತ್ತಾ ಇದ್ದರೆ, ಅವರು ಬೆಳಗ್ಗೆ complaint ಕೊಡುವುದಕ್ಕೆ ಹೋದರೆ, ಬಟ್ಟೆಯೊಳಗೆ 30 ಸಾವಿರ ಕೊಟ್ಟು, ಮೂರು ಜನಕ್ಕೂ ಹತ್ತು-ಹತ್ತು ಸಾವಿರ ರೂಪಾಯಿ ಕೊಟ್ಟು,

ಅಧ್ಯಕ್ಷರು : ಆಯಿತು clarification ಕೇಳಿ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : Transfer ಅಲ್ಲ, ತಕ್ಷಣವೇ suspend ಆಗಬೇಕು. ಬೇಕಾದಷ್ಟು ದಾಖಲೆಗಳನ್ನು ಕೊಡುತ್ತೇನೆ. ಪ್ರತಿ ದಿನ ಒಬ್ಬೊಬ್ಬರು ಅವರ ವಿರುದ್ಧ strike ಮಾಡುತ್ತಿದ್ದಾರೆ. ಪ್ರತಿ ದಿನ ಪೇಪರ್‌ನಲ್ಲಿ ಬರುತ್ತಿದೆ. ಇವೆಲ್ಲಾ ತಾವು ಗಮನಿಸುತ್ತಿಲ್ಲವೇ ? ಈ

ತಕ್ಷಣದಿಂದಲೇ ಈ ಸದನ suspend ಮಾಡಬೇಕು. ಇಲ್ಲವೆಂದರೆ ನಾನು ಧರಣಿ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : Suspend ಆಗುವವರೆಗೂ ನಾನು ಎದ್ದು ಹೋಗುವುದಿಲ್ಲ. ನೀವು ಇದನ್ನು ಸಮಾಪನಗೊಳಿಸಬಹುದು, ನಾನು ನನ್ನ ತಾಲ್ಲೂಕಿನ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ, ಇದು ಕ್ಷಮಿಸಲಾಗದ ಅಪರಾಧ, ನಾನು ಧರಣಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ರಾಮಸ್ವಾಮಿಗೌಡರೆ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಮಾತನಾಡಲಿ ಬಿಡಿ.. ..

ಅಧ್ಯಕ್ಷರು: ಅದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ಒಬ್ಬ ಶಾಸಕರು compliant ಕೊಟ್ಟಿದ್ದಾರೆ. ಸರ್ಕಾರ ಸತ್ಯವನ್ನು ಒಪ್ಪಿಕೊಂಡಿದ್ದಾರೆ. ಏನೆಂದರೆ, SP level, DSP level ನಲ್ಲಿ ತನಿಖೆ ಮಾಡಿದ್ದೇವೆ ತಪ್ಪಾಗಿದೆ ಎಂದು ಹೇಳಿದ್ದಾರೆ. ಆದರೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಸರ್ಕಾರ ಎಷ್ಟು ಭದ್ರವಾಗಿರಬೇಕು, ಇಲ್ಲಿ ಕಾಣುವುದೇನೆಂದರೆ, ಆರೋಪ ಒಪ್ಪಿಕೊಳ್ಳಲಾಗಿದೆ, ಸಾಭೀತಾಗಿದೆ, ಎಲ್ಲಾ ಆಗಿದೆ, ಮುಂದಿನ transfer ನಲ್ಲಿ ಅಂದರೆ, general transfer ಮಾಡುವಾಗ transfer ಮಾಡಲಾಗುತ್ತದೆಂದು ಸರ್ಕಾರ ಹೇಳಿದರೆ, how can the administration be ? ಇದು ಯಾವುದೇ ತನಿಖೆ ಮಾಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. You should come out, Yes, by the hour 1 am goint to suspend him ಎಂದು ಹೇಳಬೇಕು. ಅದನ್ನು ಬಿಟ್ಟು ಏಕೆ ಈ ರೀತಿ ಮಾಡುತ್ತಿದ್ದೀರಿ. You have accepted it. ನಿಮ್ಮ administrationಗೆ control ಸಿಕ್ಕಲಿ ಸ್ವಾಮಿ, ಅದು ಯಾವ ಸಬ್ ಇನ್ಸ್‌ಪೆಕ್ಟರ್ ಅವರೋ ಏನೋ, ಅದು ಯಾರೂ ಬೇಕಾದರೂ ಇರಲಿ, that is a different question. You have control over the administration. ಏಕೆ ಬಿಟ್ಟಿದ್ದೀರಿ ?

ಶ್ರೀ ಸಿದ್ದರಾಮಯ್ಯ : ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕಲ್ಲವೇ ? ಅದಕ್ಕೋಸ್ಕರ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : what is there? ನೀವು ಮಾಡಿ ಸಾರ್, ಇಂತಹ ವಿಚಾರಗಳಲ್ಲಿ ಮಾಡುವುದಕ್ಕೆ ಬೇರೆಯವರಿಗೂ ಭಯ ಇರಲಿ. ಇಲ್ಲಿ ಯಾರೂ ಚಿಕ್ಕಪ್ಪನ ಮಗ ಇಲ್ಲ, ದೊಡ್ಡಪ್ಪನ ಮಗ ಇಲ್ಲ. ಇಲ್ಲಿ ಯಾರೂ ಬರುವುದಿಲ್ಲ ಎಂದು ತಲೆಕಡಿಸಿಕೊಳ್ಳುವುದಕ್ಕೆ ಏನೂ ಇಲ್ಲ. ಒಬ್ಬರು ಎಂ.ಎಲ್.ಎ. ನೀವೂ ಒಪ್ಪಿಕೊಂಡಿದ್ದೀರಾ, you have accepted it. ಒಂದು ಸರ್ಕಾರಕ್ಕೆ, ಒಂದು ತೀರ್ಮಾನಕ್ಕೆ ಒಂದು ಬದ್ಧತೆ ಇರಲಿ, ಇಲ್ಲೇ Chief Minister ಅವರು Yes, ಸಾಯಂಕಾಲದಷ್ಟರೊಳಗೆ suspend ಮಾಡುತ್ತೇನೆ ಎಂದು ಹೇಳಿದರೆ ಮುಗಿದು ಹೋಗಿಯಿತು. ಮುಂದಿನ general transfer ನಲ್ಲಿ ಮಾಡಲಾಗುವುದು ಎಂದರೆ administration ಏನಾಗುತ್ತದೆ ಸ್ವಾಮಿ ? What will be the administration ?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಸಂಸದೀಯ ಮತ್ತು ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶಾಸಕರು ತಮ್ಮ ಅನುಭವದ ಹಿನ್ನೆಲೆ ಮೇಲೆ ಏನು complaints ಕೊಟ್ಟಿದ್ದರು ಅದರ ಬಗ್ಗೆ ವಿಚಾರಣೆಯನ್ನೂ ನಡೆಸಿ, ಅದು ಮೇಲ್ನೋಟಕ್ಕೆ ಆರೋಪಗಳು ಸಾಬೀತಾಗಿದೆ ಎಂದು ಇವತ್ತು ಇಲಾಖಾ ವಿಚಾರಣೆ ನಡೆಯುತ್ತಿದೆ. ಇಲಾಖಾ ವಿಚಾರಣೆ ಸಂಪೂರ್ಣವಾದ ಮೇಲೆ ಈ suspension ಮಾಡುವುದರಲ್ಲಿ ಅರ್ಥವಿದೆ ಅಥವಾ ಇನ್ನೇನು action ತೆಗೆದುಕೊಳ್ಳಬಹುದು ಅದನ್ನು ಮಾಡುತ್ತೇವೆ. ಅದಕ್ಕೆ ಕೂಡಲೇ ಈ ಒಂದು ಗಳಿಗೆಯಲ್ಲಿ ಅವರನ್ನು ಆ station ನಿಂದ ವರ್ಗಾವಣೆ ಮಾಡುತ್ತೇವೆ. Suspension ಅನ್ನು ವಿಚಾರಣಾ ವರದಿ ಬಂದ ಮೇಲೆ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ಇಷ್ಟೂ ಜನ ಸಾರ್ವಜನಿಕರು ಮಾಡಿರುವ complaint ಗಳು ಇವು.

ಅಧ್ಯಕ್ಷರು : ಸಾಕು ಅವರು ಹೇಳಿದ್ದಾರೆ, ಆಯಿತು, ಮಾನ್ಯ ರಾಮಸ್ವಾಮಿಗೌಡರೆ, ತಕ್ಷಣವೇ ಮಾಡುತ್ತೇವೆ ಎಂದು ಹೇಳಿದ್ದಾರಲ್ಲಾ.

ಶ್ರೀ ಸಿದ್ದರಾಮಯ್ಯ : ಈ ಗಳಿಗೆಯಲ್ಲೇ ಮಾಡಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ನೀವು ನಾನು ಪೂರ್ತಿ ಹೇಳುವುದಕ್ಕೆ ಬಿಡುತ್ತಿಲ್ಲ.

ಅಧ್ಯಕ್ಷರು : ಆಯಿತು. shift ಮಾಡುತ್ತಾರೆ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ಜಿಲ್ಲಾ ಮಂತ್ರಿಗಳು ಇದ್ದಾರೆ, SP report ಕೇಳಿ, ನನಗೆ ಪೂರ್ತಿ ಹೇಳುವುದಕ್ಕೆ ಬಿಡುತ್ತಿಲ್ಲ. ಇವೆಲ್ಲಾ public complaints.

ಅಧ್ಯಕ್ಷರು : ಆಯಿತು, ಈಗಲೇ ಮಾಡುತ್ತಾರೆ ಕುಳಿತುಕೊಳ್ಳಿ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ಧನ್ಯವಾದಗಳು.

ಅಧ್ಯಕ್ಷರು : ಮಾನ್ಯ ಬಿ.ಕೆ. ಸಂಗಮೇಶ್ವರ್‌ರವರು ಮಾತನಾಡಬೇಕು. ಅವರು ಗೈರು ಹಾಜರಿಯಾಗಿದ್ದಾರೆ. ಮಾನ್ಯ ವಿ. ಮುನಿಯಪ್ಪನವರು ಮಾತನಾಡಬೇಕು.

ಶ್ರೀ ವಿ. ಮುನಿಯಪ್ಪ : ಈಗಾಗಲೇ ನಿಯಮ 69ರಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡಿದ್ದರೆ ಬೇಡ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಿಯಮ 69ರಡಿಯಲ್ಲಿ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವೈ.ಎಸ್. ರುದ್ರೇಶ್‌ಗೌಡ ರವರು ಮಾತನಾಡಬೇಕು. ಅವರು ಗೈರು ಹಾಜರಿಯಾಗಿದ್ದಾರೆ. ಮಾನ್ಯ ಎಂ.ಟಿ. ಕೃಷ್ಣಪ್ಪನವರು ಮಾತನಾಡಬೇಕು.